Kerala Gazette No. 31 dated 4th August 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

ನಂಬ್ರ 19961/ಲೆಗ್. ಜಿ2/2017/ಕಾನೂನು. ತಿರುವನಂತಪುರಂ, 2018 ಫೆಬ್ರವರಿ 12, 1193 ಮಕರ 29/ 1939 ಮಾಘ 23.

2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

ಕಾನೂನು ಇಲಾಖೆ ಕಾರ್ಯದರ್ಶಿ.

## 2018ರ 18ನೇ ನಂಬ್ರ ಅಧ್ಯಾದೇಶ

## 2018ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

2015ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ ಅಧಿನಿಯಮವನ್ನು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2017ರ 28)ವು 2017ರ ಡಿಸೆಂಬರ್ 8ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟರೂ;

ಹಾಗೂ 2018 ಜನವರಿ 22ನೇ ದಿನಾಂಕದಂದು ಪ್ರಾರಂಭಗೊಂಡು 2018 ಫೆಬ್ರವರಿ 7ರಂದು ಅಂತ್ಯಗೊಂಡ ಕೇರಳ ವಿಧಾನಸಭೆಯ ಅಧಿವೇಶನಕಾಲದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲಾಗಿ ರಾಜ್ಯ ವಿಧಾನಸಭೆಯ ಒಂದು ಅಧಿನಿಯಮವನ್ನು ಜಾರಿಗೆ ತರುವುದಕ್ಕಾಗಿ ಒಂದು ಮಸೂದೆಯುನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಮಂಜೂರು ಮಾಡಲು ಸಾಧ್ಯವಾಗದಿರುವುದರಿಂದಲೂ;

ಹಾಗೂ, ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ (ಎ) ಉಪಖಂಡದ ಪ್ರಕಾರ, 2017ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2017ರ 28)ಕ್ಕೆ 2018 ಮಾರ್ಚ್ 5ನೇ ದಿನಾಂಕದಿಂದ ಪ್ರಾಬಲ್ಯ ಇಲ್ಲದಾಗುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸದಿದ್ದಲ್ಲಿ ಸಮಸ್ಯೆಗಳು ಉದ್ಭವಿಸುವುದರಿಂದಲೂ;

ಹಾಗೂ ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಹಾಗೂ ತಾನು ತುರ್ತುಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುತ್ತಾರೆ:—

1. ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017ರ ಡಿಸೆಂಬರ್ 8ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 2015ರ 17ನೇ ಅಧಿನಿಯಮವನ್ನು ತಾತ್ಕಾಲಿಕವಾಗಿ ತಿದ್ದುಪಡಿ ಮಾಡತಕ್ಕದ್ದಾಗಿರುತ್ತದೆ.—ಈ ಅಧ್ಯಾದೇಶವು ಜಾರಿಯಲ್ಲಿರುವ ಅವಧಿಯಲ್ಲಿ, 2015ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ ಅಧಿನಿಯಮ (2015ರ 17) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ವು 3ರಿಂದ 10ನೇ ವರೆಗಿನ ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿದ ತಿದ್ದುಪಡಿಗೊಳಪಟ್ಟು ಜಾರಿಯಲ್ಲಿರುತ್ತದೆ.

3. ಕೆಲವು ಪದ ಪ್ರಯೋಗಗಳ ಉಲ್ಲೇಖಗಳಿಗೆ ಬದಲಿಯಾಗಿ ಇತರ ಪದ ಪ್ರಯೋಗಗಳನ್ನು ಸೇರಿಸುವುದು.—ಪ್ರಧಾನ ಅಧಿನಿಯಮದಲ್ಲಿ,—

(ಎ) "ಶೈಕ್ಷಣಿಕ ಸಮಿತಿ" ಎಂಬೀ ಪದಗಳು ಬರುವ ಕಡೆಗಳಲ್ಲೆಲ್ಲ ಅದಕ್ಕೆ ಬದಲಾಗಿ "ಶೈಕ್ಷಣಿಕ ಪರಿಷತ್ತು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) "ಕಾರ್ಯನಿರ್ವಾಹಕ ಸಮಿತಿ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲ ಅದಕ್ಕೆ ಬದಲಾಗಿ "ಸಿಂಡಿಕೇಟ್" ಎಂಬ ಪದಗಳನ್ನು ಸೇರಿಸತಕ್ಕದ್ದು.

4. 14ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 14ನೇ ವಿಭಾಗದ (5)ನೇ ಉಪ-ವಿಭಾಗದಲ್ಲಿನ "ಆದಷ್ಟು ಬೇಗನೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು ಹಾಗೂ "ಅಂತಹ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ಲಿಖಿತವಾಗಿ ವರದಿ ಮಾಡತಕ್ಕದ್ದಾಗಿರುತ್ತದೆ" ಎಂಬೀ ಪದಗಳ ಬದಲಾಗಿ "ಅಂತಹ ಪ್ರಾಧಿಕಾರದ ಅಥವಾ ನಿಕಾಯದ ನಿಕಟ ತರುವಾಯದ ಸಭೆಯಲ್ಲಿ ಅಂಗೀಕಾರಕ್ಕಾಗಿ ಸಲ್ಲಿಸತಕ್ಕದ್ದಾಗಿದೆ" ಎಂಬೀ ಪದಗಳನ್ನು ಸೇರಿಸತಕ್ಕದ್ದು.

5. 15ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 15ನೇ ವಿಭಾಗದ (3)ನೇ ಉಪ-ವಿಭಾಗ ಹಾಗೂ ಷರತ್ತಿಗೆ ಬದಲಿಯಾಗಿ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(3) ಸಹ-ಉಪಕುಲಾಧಿಪತಿಯ ನೇಮಕಾತಿಯ ಅವಧಿಯು ನಾಲ್ಕು ವರ್ಷಗಳು ಆಗಿರತಕ್ಕದ್ದು.".

6. 22ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 22ನೇ ವಿಭಾಗದಲ್ಲಿ.—

"(iv) ಸಂಶೋಧನಾ ಪರಿಷತ್ತು" ಎಂಬ ಐಟಮ್‌ನ ನಂತರ ಬರುವ "ಹಾಗೂ" ಎಂಬ ಪದವನ್ನು ಬಿಟ್ಟು ಬಿಡತಕ್ಕದ್ದು ಹಾಗೂ ಹಾಗೇ ತಿದ್ದುಪಡಿ ಮಾಡಿದ (iv)ನೇ ಐಟಮ್‌ನ ನಂತರ ಈ ಕೆಳಗಿನ ಐಟಮ್‌ಗಳನ್ನು ಸೇರಿಸತಕ್ಕದ್ದು, ಅದೇನೆಂದರೆ;

"(v) ಅಧ್ಯಯನಗಳ ಮಂಡಳಿ;

(vi) ಆರ್ಥಿಕ ಸಮಿತಿ;

(vii) ಯೋಜನಾ ಸಮಿತಿ;

(viii) ವಿದ್ಯಾರ್ಥಿ ಪರಿಷತ್ತು ಹಾಗೂ".

7. 23ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 23ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ,—

(ಎ) "ಪದ ನಿಮಿತ್ತ ಸದಸ್ಯರು" ಎಂಬ ಶೀರ್ಷಿಕೆಯ ಕೆಳಗೆ (xv)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮ್‌ನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xv) ವಿಶ್ವವಿದ್ಯಾಲಯದ ಯೂನಿಯನ್ ಚೇರ್‌ಮ್ಯಾನ್.";

(ಬಿ) "ಚುನಾಯಿತ ಸದಸ್ಯರುಗಳು" ಎಂಬ ಶೀರ್ಷಿಕೆಯ ಕೆಳಗೆ, (ii)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮ್‌ನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ii) ಶಾಸನಗಳ ಮೂಲಕ ಗೊತ್ತುಪಡಿಸುವ ಪ್ರಕಾರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಅವರು ಆಯ್ಕೆ ಮಾಡುವ ಆರು ವಿದ್ಯಾರ್ಥಿ ಪ್ರತಿನಿಧಿಗಳು, ಅವರಲ್ಲಿ ಮೂರು ಮಂದಿ ಸರಕಾರಿ ಇಂಜಿನಿಯರಿಂಗ್ ಕಾಲೇಜುಗಳಿಂದ, ಒಬ್ಬರು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿಂದ, ಒಬ್ಬರು ಸರಕಾರಿ ನಿಯಂತ್ರಿತ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜುಗಳಿಂದ ಹಾಗೂ ಒಬ್ಬರು ಖಾಸಗೀ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜುಗಳಿಂದ ಆಗಿರತಕ್ಕದ್ದು. ಪ್ರಸ್ತುತ ಸದಸ್ಯರಲ್ಲಿ ಒಬ್ಬರು ಸ್ನಾತಕೋತರ ಪದವಿ ವಿದ್ಯಾರ್ಥಿ, ಒಬ್ಬರು ಮಹಿಳೆ ಹಾಗೂ ಒಬ್ಬರು ಪರಿಶಿಷ್ಟ ಜಾತಿಗೊಳಪಟ್ಟವರೋ ಪರಿಶಿಷ್ಟ ಪಂಗಡಕ್ಕೊಳಪಟ್ಟವರೋ ಆಗಿರತಕ್ಕದ್ದು.";

(ಸಿ) "ನಾಮ ನಿರ್ದೇಶಿತ ಸದಸ್ಯರುಗಳು" ಎಂಬ ಶೀರ್ಷಿಕೆಯ ಕೆಳಗೆ,—

(i) (iv)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮ್‌ನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iv) ಪಿ.ಎಚ್.ಡಿ ಸಂಶೋಧನೆಯ ಮೇಲ್ವಿಚಾರಣೆಯನ್ನು ವಹಿಸಿರುವಂತಹ ಹಾಗೂ ಪೋಸ್ಟ್ ಡೋಕ್ಟರಲ್ ಪಬ್ಲಿಕೇಶನ್‌ನ್ನು ಹೊಂದಿರುವಂತಹ, ಕೇರಳದ ಯಾವುದಾದರೂ ವಿಶ್ವವಿದ್ಯಾಲಯಗಳಿಂದ ಎರಡು ಶಿಕ್ಷಣ ತಜ್ಞರುಗಳು.".

(ii) (v)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮ್‌ನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(v) ಸರಕಾರವು ನಾಮನಿರ್ದೇಶ ಮಾಡುವ ಮೂರು ಇಂಜಿನಿಯರಿಂಗ್ ಕಾಲೇಜುಗಳ ಮುಖ್ಯಸ್ಥರುಗಳು ಅಥವಾ ಮ್ಯಾನೇಜರ್‌ಗಳು, ಅವರಲ್ಲಿ ಒಬ್ಬರು ಅನುದಾನಿತ ಕಾಲೇಜಿನಿಂದ, ಒಬ್ಬರು ಸರಕಾರ ನಿಯಂತ್ರಿತ ಸ್ವಸಹಾಯ ಕಾಲೇಜಿನಿಂದ ಹಾಗೂ ಒಬ್ಬರು ಖಾಸಗಿ ಸ್ವಸಹಾಯ ಕಾಲೇಜಿನಿಂದ ಆಗಿರತಕ್ಕದ್ದು;";

(iii) (vi)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮ್‌ಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(vi) ಅಧ್ಯಾಪಕರುಗಳಿಂದ ಸರಕಾರವು ನಾಮನಿರ್ದೇಶ ಮಾಡುವ, ಪಿ.ಎಚ್.ಡಿ ಹಾಗೂ ಹತ್ತು ವರ್ಷದ ಬೋಧನಾ ಅನುಭವವಿರುವ ಎರಡು ಸರಕಾರಿ ಇಂಜಿನಿಯರಿಂಗ್ ಕಾಲೇಜು ಅಧ್ಯಾಪಕರುಗಳು, ಒಬ್ಬರು ಅನುದಾನಿತ ಇಂಜಿನಿಯರಿಂಗ್ ಕಾಲೇಜು ಅಧ್ಯಾಪಕ, ಒಬ್ಬರು ಸರಕಾರ ನಿಯಂತ್ರಿತ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜು ಅಧ್ಯಾಪಕ, ಒಬ್ಬರು ಖಾಸಗೀ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜು ಅಧ್ಯಾಪಕ, ಪ್ರಸ್ತುತ ಸದಸ್ಯರಲ್ಲಿ ಒಬ್ಬರು ಮಹಿಳೆ ಹಾಗೂ ಒಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೊಳಪಟ್ಟ ವ್ಯಕ್ತಿ ಹಾಗೂ ಒಬ್ಬರು ಇಂಜನಿಯರಿಂಗ್ ಅಲ್ಲದ ವಿಜ್ಞಾನ ವಿಷಯದ ಅಧ್ಯಾಪಕನೂ ಆಗಿರತಕ್ಕದ್ದು.

(vii) ಅಧ್ಯಾಪಕೇತರ ಸಿಬ್ಬಂದಿಗಳಿಂದ ಸರಕಾರವು ನಾಮ ನಿರ್ದೇಶ ಮಾಡುವ ಒಬ್ಬ ಸದಸ್ಯ.";

(ಡಿ) "ಇತರ ಸದಸ್ಯರುಗಳು" ಎಂಬ ಶೀರ್ಷಿಕೆಯ ಕೆಳಗೆ, (i)ನೇ ಐಟಮ್‌ನ್ನು ಬಿಟ್ಟುಬಿಡತಕ್ಕದ್ದು.

8. 27ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 27ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ, "ಪದನಿಮಿತ್ತ ಸದಸ್ಯರುಗಳು" ಎಂಬ ಶೀರ್ಷಿಕೆಯ ಕೆಳಗೆ,—

(ಎ) (xi)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮ್‌ನ್ನು ಹಾಗೂ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xi) ಬೋರ್ಡ್ ಓಫ್ ಗವರ್ನರ್ಸ್‌ನಲ್ಲಿನ ವಿದ್ಯಾರ್ಥಿ ಪ್ರತಿನಿಧಿಗಳಿಂದ ಸರಕಾರವು ನಾಮನಿರ್ದೇಶ ಮಾಡುವ ಒಬ್ಬ ಸದಸ್ಯ:

ಆದರೆ, ಶಾಸನಗಳ ಪ್ರಕಾರ ವಿದ್ಯಾರ್ಥಿ ಪ್ರತಿನಿಧಿಗಳ ಚುನಾವಣೆ ಪೂರ್ತಿಯಾಗದಿರುವ ಸಂದರ್ಭದಲ್ಲಿ, ಚುನಾವಣೆ ಪೂರ್ತಿಯಾಗುವವರೆಗೆ, ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಲ್ಪಟ್ಟ ಸರಕಾರಿ ಇಂಜಿನಿಯರಿಂಗ್ ಕಾಲೇಜಿನ ಒಬ್ಬ ವಿದ್ಯಾರ್ಥಿಯನ್ನು ಸರಕಾರವು ನಾಮನಿರ್ದೇಶ ಮಾಡಬಹುದಾಗಿದೆ;"

(ಬಿ) (xiii)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮ್‌ನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xiii) ಬೋರ್ಡ್ ಓಫ್ ಗವರ್ನರ್ಸ್‌ನಲ್ಲಿನ ಇಂಜಿನಿಯರಿಂಗ್ ಕಾಲೇಜ್ ಮ್ಯಾನೇಜರ್‌ಗಳಿಂದ ಅಥವಾ ಮುಖ್ಯಸ್ಥರುಗಳಿಂದ ಸರಕಾರ ನಾಮನಿರ್ದೇಶಮಾಡುವ ಒಬ್ಬ ಸದಸ್ಯ;".

9. 31ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 31ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ,—

(ಎ) (iii)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iii) ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಲ್ಪಟ್ಟ ಸರಕಾರಿ ಇಂಜಿನಿಯರಿಂಗ್ ಕಾಲೇಜ್, ಅನುದಾನಿತ ಇಂಜಿನಿಯರಿಂಗ್ ಕಾಲೇಜು, ಸರಕಾರದ ನಿಯಂತ್ರಣದಲ್ಲಿರುವ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜು, ಖಾಸಗೀ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜು ಎಂಬೀ ಪ್ರತಿಯೊಂದು ವಿಭಾಗದಿಂದಲೂ ಕುಲಪತಿಯವರು ನೀಡುವ ತಲಾ ಮೂರು ಮಂದಿಯನ್ನು ಒಳಗೊಳ್ಳುವ ಪಟ್ಟಿಗಳಿಂದಲೂ ಬೋರ್ಡ್ ಓಫ್ ಗವರ್ನರ್ಸ್ ನಾಮ ನೀರ್ದೇಶಮಾಡುವ ತಲಾ ಒಂದು ಪ್ರಾಂಶುಪಾಲರು; ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು, ಪಟ್ಟಿಗಳಲ್ಲಿ ಸೇರಿಸಲ್ಪಡಲು ಅರ್ಹತೆಯಿರುವ ಮಹಿಳೆಯ ಅಭಾವದಲ್ಲಿ ಇತರ ವಿಭಾಗಗಳಿಗೆ ಸೇರಿದವರನ್ನು ಪರಿಗಣಿಸತಕ್ಕದ್ದು.";

(ಬಿ) (iv)ನೇ ಐಟಮ್‌ನ ಬದಲಾಗಿ ಈ ಕೆಳಗಿನ ಐಟಮನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iv) ವಿಶ್ವವಿದ್ಯಾಲಯದೊಂದಿಗೆ ಸಂಯೋಜನೆ ಮಾಡಲ್ಪಟ್ಟ ಸರಕಾರಿ ಇಂಜಿನಿಯರಿಂಗ್ ಕಾಲೇಜು, ಅನುದಾನಿತ ಇಂಜಿನಿಯರಿಂಗ್ ಕಾಲೇಜು, ಸರಕಾರದ ನಿಯಂತ್ರಣದಲ್ಲಿರುವ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜು, ಖಾಸಗೀ ಸ್ವಸಹಾಯ ಇಂಜಿನಿಯರಿಂಗ್ ಕಾಲೇಜು ಎಂಬೀ ಪ್ರತಿಯೊಂದು ವಿಭಾಗದಿಂದಲೂ ವಿವಿಧ ಇಂಜಿನಿಯರಿಂಗ್ ಶಾಖೆಗಳನ್ನು ಪ್ರತಿನಿಧಿಸುವ ಹಾಗೂ ಪ್ರೊಫೆಸರ್‌ಗಳ ಪದವಿಗಿಂತ ಕಡಿಮೆಯಲ್ಲದ್ದೂ ಆದ ಪ್ರಸ್ತುತ ಪ್ರತಿಯೊಂದು ವಿಭಾಗದಿಂದ ಕುಲಪತಿ ನೀಡುವ ತಲಾ ಮೂರು ಹೆಸರು ಒಳಗೊಳ್ಳುವ ಪಟ್ಟಿಯಿಂದಲೂ, ಬೋರ್ಡ್ ಓಫ್ ಗವರ್ನರ್ಸ್

ನಾಮನಿರ್ದೇಶ ಮಾಡುವ ತಲಾ ಒಂದು ಅಧ್ಯಾಪಕರು; ಅವರಲ್ಲಿ ಒಬ್ಬರು ಮಹಿಳೆ ಹಾಗೂ ಒಬ್ಬರು ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡಕ್ಕೊಳಪಟ್ಟವರಾಗಿರತಕ್ಕದ್ದು. ಪಟ್ಟಿಯಲ್ಲಿ ಸೇರಿಸಲ್ಪಡಲು ಅರ್ಹತೆಯಿರುವ ಮಹಿಳೆಯ ಅಥವಾ ಪರಿಶಿಷ್ಟ ಜಾತಿಗೆ ಸೇರಿದ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರ ಅಭಾವದಲ್ಲಿ ಆ ವಿಭಾಗಗಳಿಗಾಗಿ ತೆಗೆದಿರಿಸಿದ ಸ್ಥಾನಗಳಿಗೆ ಇತರ ವಿಭಾಗಕ್ಕೆ ಅಥವಾ ವಿಭಾಗಗಳಿಗೆ ಸೇರಿದವರನ್ನು ಪರಿಗಣಿಸತಕ್ಕದ್ದು.";

(ಸಿ) (v)ನೇ ಐಟಮ್‌ನಲ್ಲಿ, "ಎರಡು ಪ್ರಮುಖ ಉದ್ಯಮಿಗಳು" ಎಂಬ ಪದಗಳ ಬದಲಾಗಿ "ಒಬ್ಬ ಪ್ರಮುಖ ಉದ್ಯಮಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) (viii)ನೇ ಐಟಮಿನ ನಂತರ ಈ ಕೆಳಗಿನ ಐಟಮ್‌ಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ix) ಕೇರಳ ರಾಜ್ಯ ಉನ್ನತ ವಿದ್ಯಾಭ್ಯಾಸ ಪರಿಷತ್ತಿನ ವೈಸ್‌ಚೇರ್‌ಮ್ಯಾನ್ ಅಥವಾ ಅವರು ಗೊತ್ತುಪಡಿಸುವ ಒಬ್ಬ ಪರಿಷತ್ತಿನ ಸದಸ್ಯ;

(x) ಕುಲಾಧಿಪತಿಯವರು ನಾಮನಿರ್ದೇಶ ಮಾಡುವ, ಬೋರ್ಡ್ ಓಫ್ ಗರ್ವರ್ನರ್ಸ್‌ನಲ್ಲಿನ ಎರಡು ವಿದ್ಯಾರ್ಥಿ ಪ್ರತಿನಿಧಿಗಳು, ಅವರಲ್ಲಿ ಒಬ್ಬರು ಪದವಿ ವಿದ್ಯಾರ್ಥಿ ಹಾಗೂ ಒಬ್ಬರು ಸ್ನಾತಕೋತ್ತರ ಪದವಿ ವಿದ್ಯಾರ್ಥಿ ಆಗಿರತಕ್ಕದ್ದು, ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು."

10. 37ನೇ ವಿಭಾಗದ ಬದಲು ಹೊಸ ವಿಭಾಗಗಳ ಸೇರ್ಪಡೆ.—ಪ್ರಧಾನ ಅಧಿನಿಯಮದ 37ನೇ ವಿಭಾಗದ ಬದಲಾಗಿ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"37 ಅಧ್ಯಯನಗಳ ಮಂಡಳಿ.—(1) ಸಿಂಡಿಕೇಟ್ ನಿಶ್ಚಯಿಸುವ ಪ್ರಕಾರ ಪ್ರತಿಯೊಂದು ಅಧ್ಯಯನ ಶಾಖೆಗೂ ತಲಾ ಒಂದು ಅಧ್ಯಯನಗಳ ಮಂಡಳಿ ಇರತಕ್ಕದ್ದು.

(2) ಅಧ್ಯಯನಗಳ ಮಂಡಳಿಯ ರಚನೆ ಹಾಗೂ ಅಧಿಕಾರಗಳು ಶಾಸನಗಳ ಮೂಲಕ ಗೊತ್ತುಪಡಿಸಬಹುದಾದ ಪ್ರಕಾರ ಆಗಿರತಕ್ಕದ್ದು.".

"37ಎ. ಆರ್ಥಿಕ ಸಮಿತಿ.—(1) ವಿಶ್ವವಿದ್ಯಾಲಯದ ಆರ್ಥಿಕ ವಿಷಯಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಗೆ ಸಲಹೆಯನ್ನು ನೀಡುವುದಕ್ಕಾಗಿ ಸಿಂಡಿಕೇಟ್ ನಿಯೋಗಿಸುವ ನಿರ್ದಿಷ್ಟ ಅರ್ಹತೆಯಿರುವ ಒಬ್ಬರು ಚೇರ್‌ಮ್ಯಾನ್ ಆಗಿ ಒಂದು ಆರ್ಥಿಕ ಸಮಿತಿ ಇರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಆರ್ಥಿಕ ಸಮಿತಿಯ ರಚನೆ, ಅಧಿಕಾರಗಳು, ಹೊಣೆಗಳು ಹಾಗೂ ಅಧಿಕಾರಗಳನ್ನು ವಹಿಸಿಕೊಡುವಂತಹ ಪ್ರಕ್ರಿಯೆಗಳು ಶಾಸನಗಳ ಮೂಲಕ ಗೊತ್ತುಪಡಿಸಬಹುದಾದ ಪ್ರಕಾರ ಆಗಿರತಕ್ಕದ್ದು.

"37ಬಿ ಯೋಜನಾ ಸಮಿತಿ.—(1) ವಿಶ್ವವಿದ್ಯಾಲಯದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಅಗತ್ಯವೆಂದು ಭಾವಿಸಲಾಗುವ ಯಾವುದಾದರೂ ಕಾರ್ಯಗಳಿಗೆ ಸಂಬಂಧಿಸಿ ಸಿಂಡಿಕೇಟ್ ಹಾಗೂ ಶೈಕ್ಷಣಿಕ ಪರಿಷತ್ತಿಗೆ ಸಲಹೆ ನೀಡುವುದಕ್ಕಾಗಿ ಸಿಂಡಿಕೇಟ್ ನಿಯೋಗಿಸುವ ಒಬ್ಬ ವ್ಯಕ್ತಿಯು ಚೇರ್‌ಮ್ಯಾನ್ ಆಗಿ ಒಂದು ಯೋಜನಾ ಸಮಿತಿ ಇರತಕ್ಕದ್ದು.

(2) ಯೋಜನಾ ಸಮಿತಿಗೆ ಈ ಕೆಳಗಿನ ಹೊಣೆಗಾರಿಕೆ ಇರತಕ್ಕದ್ದು, ಅದೇನೆಂದರೆ:—

(i) ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಸಂಬಂಧಿಸಿ ಐದು ವರ್ಷಕ್ಕಿರುವ ಸಮಗ್ರವಾದ ಯೋಜನೆಯನ್ನು ವಿನ್ಯಶಗೊಳಿಸುವುದು;

(ii) ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಅಪೇಕ್ಷಣೀಯವಾದ ಮಾರ್ಗಗಳ ರೂಪುರೇಷೆಗಳನ್ನು ಸಿದ್ದಪಡಿಸುವುದು;

(iii) ಸಿಂಡಿಕೇಟ್ ಅಂಗೀಕರಿಸಿದ ಯೋಜನೆಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿ ಸಲಹೆಯನ್ನು ನೀಡುವುದು;

(iv) ಯೋಜನೆಯ ಕಾಲದಲ್ಲಿ ಸಾಧಿಸಲು ಉದ್ದೇಶಿಸಿದ ಗುರಿಗಳನ್ನು ನೇರವೇರಿಸುವುದರಲ್ಲಿ ವಿಶ್ವವಿದ್ಯಾಲಯವು ತೋರಿದ ಸಮಗ್ರ ಪರಿಣತಿಯನ್ನು ಅವಲೋಕಿಸುವುದು.

(3) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಯೋಜನಾ ಸಮಿತಿಯ ರಚನೆ, ಅಧಿಕಾರಗಳು, ಹೊಣೆಗಳು ಹಾಗೂ ಅಧಿಕಾರಗಳನ್ನು ವಹಿಸಿಕೊಡುವಂತಹ ಪ್ರಕ್ರಿಯೆಗಳೂ ಶಾಸನಗಳ ಮೂಲಕ ಗೊತ್ತುಪಡಿಸಬಹುದಾದ ಪ್ರಕಾರ ಆಗಿರತಕ್ಕದ್ದು.

37ಸಿ ವಿದ್ಯಾರ್ಥಿ ಪರಿಷತ್ತು.—(1) ವಿದ್ಯಾರ್ಥಿಗಳ ಕಲ್ಯಾಣಕ್ಕೆ ಸಂಬಂಧಿಸಿದ ಕಾರ್ಯಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಒಂದು ವಿದ್ಯಾರ್ಥಿ ಪರಿಷತ್ತು ಇರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ವಿದ್ಯಾರ್ಥಿ ಪರಿಷತ್ತಿನ ರಚನೆ, ಅಧಿಕಾರಗಳು, ಹೊಣೆಗಾರಿಕೆಗಳು ಹಾಗೂ ಅಧಿಕಾರಗಳನ್ನು ವಹಿಸಿಕೊಡುವಂತಹ ಪ್ರಕ್ರಿಯೆಗಳು ಶಾಸನಗಳ ಮೂಲಕ ಗೊತ್ತುಪಡಿಸಬಹುದಾದ ಪ್ರಕಾರ ಆಗಿರತಕ್ಕದ್ದು.".

11. ರದ್ಧತಿ ಮತ್ತು ರಕ್ಷಣೆ.—(1) 2017ರ ಎ. ಪಿ. ಜೆ. ಅಬ್ದುಲ್ ಕಲಾಂ ತಾಂತ್ರಿಕ ವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ (2017ರ 28)ವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಟ್ಟ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಟ್ಟ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.